**<u>ಇಂದು ದಿಃ18-07-2023 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಕೆ.ಬಿ.ಎಚ್ ವಕೀಲರಿಂದಃ**

ದಾವಾ ಎ ಶೆಡ್ಯೂಲ್ ನ ಐಟಂ ನಂಬರ್-1 ಮತ್ತು 2 ಜಾಗ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ನ ಆಸ್ತಿಗಳು ವ್ಯವಸಾಯದ ಆಸ್ತಿಗಳೆಂದರೆ ಸರಿ. ದಾವಾ ಬಿ ಶೆಡ್ಯೂಲ್ ನ ಐಟಂ ನಂಬರ್-1 ನಮ್ಮ ತಂದೆಯ ಹೆಸರಿನಲ್ಲಿದೆ. ಸದರಿ ಜಮೀನು ಗಿರಿಜಮ್ಮಳ ಹೆಸರಿನಲ್ಲಿದೆ ಎನ್ನುವುದು ಸರಿಯಲ್ಲ. ಸರ್ವೆ ನಂಬರ್-25/4 ರ ಜಮೀನಿನ ಪಹಣಿ ಪತ್ರಿಕೆ ಗಿರಿಜಮ್ಮಳನ ಹೆಸರಿನಲ್ಲಿದೆಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ. ದಾವಾ ಬಿ ಶೆಡ್ಯೂಲ್ ನ ಐಟಂ ನಂಬರ್-2 ವೀರನಗೌಡನ ಹೆಸರಿನಲ್ಲಿದೆಂದರೆ ಸರಿ. ನಮ್ಮ ತಂದೆ ಮತ್ತು ನಮ್ಮ ತಾಯಿ ಗೌರಮ್ಮ 1996 ರಲ್ಲಿ ಹಕ್ಕು ಕುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ನಮ್ಮ ತಾಯಿ ಹೆಬ್ಬಟ್ಟಿನ ಗುರುತು ಹಾಕಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಬಿ ಶೆಡ್ಯೂಲ್ ನ ಐಟಂ ನಂಬರ್-3 ಪಾರ್ವತಮ್ಮಳ ಹೆಸರಿನಲ್ಲಿದೆ ಎನ್ನುವುದು ಸರಿಯಲ್ಲ. ನಮ್ಮ ತಂದೆ ಸರ್ವೆ ನಂಬರ್-42/1 ರಲ್ಲಿ 28 ಗುಂಟಾ ಜಮೀನನ್ನು ಚಂದ್ರಮ್ಮ ಎನ್ನುವವರಿಗೆ ಮಾರಾಟ ಮಾಡಿದ್ದಾರೆಂದರೆ ಸಾಕ್ಷಿಯು, ನಾವು ಚಿಕ್ಕವರಿದ್ದಾಗ ಮಾರಾಟ ಮಾಡಿದ್ದಾರೆಂದು ಉತ್ತರಿಸುತ್ತಾರೆ. ನಮ್ಮ ತಂದೆ ನನ್ನ ಹಾಗೂ ನನ್ನ ಸಹೋದರಿಯ ಮದುವೆಗಾಗಿ ಮತ್ತು ಇತರೆ ಖರ್ಚಿಗಾಗಿ ಮಾರಾಟ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ನಮ್ಮ ತಂದೆ ಮಾರಾಟ ಮಾಡಿದ ಕ್ರಯ ಪತ್ರಗಳನ್ನು ಪ್ರಶ್ನಿಸಿರುವುದಿಲ್ಲ, ನನಗೆ ಈಗ ಗೊತ್ತಾಗಿದೆ. ನಮ್ಮ ತಾಯಿ 1 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುವುದರಿಂದ, ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಭಾಗಾಂಶ ಬರುವುದಿಲ್ಲ ಎನ್ನುವುದು ಸರಿಯಲ್ಲ.

**4 ರಿಂದ 6 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದಾರೆ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.